# ಡಾ. ಸಿದ್ಧಯ್ಯ ಪುರಾಣಿಕರ ಆಯ್ದ ಕವನ

## ೧. ಮೊದಲು ಮಾನವನಾಗು!

ಓದಿ ಬ್ರಾಹ್ಮಣನಾಗು
ಕಾದಿ ಕ್ಷತ್ರಿಯನಾಗು
ಶೂದ್ರ ವೈಶ್ಯನೆ ಆಗು
ದುಡಿದು ಗಳಿಸಿ
ಏನಾದರೂ ಆಗು
ನಿನ್ನೊಲವಿನಂತಾಗು
ಏನಾದರೂ ಸರಿಯೇ–
ಮೊದಲು ಮಾನವನಾಗು!

ಹಿಂದು ಮುಸ್ಲಿಮನಾಗು
ಬೌದ್ಧ ಕ್ರೈಸ್ತನೆ ಆಗು
ಚಾರ್ವಾಕನೇ ಆಗು
ಭೋಗ ಬಯಸಿ
ಏನಾದರೂ ಆಗು
ಹಾರೈಸಿದಂತಾಗು
ಏನಾದರೂ ಸರಿಯೆ,
ಮೊದಲು ಮಾನವನಾಗು!

ರಾಜಕಾರಣಿಯಾಗು
ರಾಷ್ಟ್ರಭಕ್ತನೆ ಆಗು
ಕಲೆಗಾರ ವಿಜ್ಞಾನಿ ವ್ಯಾಪಾರಿಯಾಗು
ಏನಾದರೂ ಆಗು
ನೀ ಬಯಸಿದಂತಾಗು
ಏನಾದರೂ ಸರಿಯೇ
ಮೊದಲು ಮಾನವನಾಗು!

## ೨. ಸಾರುತಿದೆ ಸೃಷ್ಟಿ

ಹಣ್ಣಿನಲಿ ಬೆಣ್ಣೆಯಲಿ ಕೆನೆಮೊಸರು ಹಾಲಿನಲಿ
ಕಂದದಲಿ ಜೇನಿನಲಿ ರಸಗಬ್ಬು ಬಾಳೆಯಲಿ
ಎಳನೀರು ಹೊಳೆನೀರು ಹಾಲ್ದೆನೆಯ ಕಾಳಿನಲಿ
ಸಾರುತಿದೆ ಸೃಷ್ಟಿಯಿದು ಸವಿಯಾಗಿ ನಿಂದು–
"ಸವಿಯಾಗು, ಸವಿಯಾಗು, ಸವಿಯಾಗು!" ಎಂದು.

ತಾರೆಯಲಿ ಚಂದ್ರನಲಿ ಸೂರ್ಯನಲಿ ರನ್ನದಲಿ
ಕಂಚಿನಲಿ ಮಿಂಚಿನಲಿ ಮುತ್ತಿನಲಿ ಚಿನ್ನದಲಿ
ಜ್ಯೋತಿಯಲಿ ನಯನದಲಿ ಉಷೆಯ ಹೊಂಬಣ್ಣದಲಿ
ಸಾರುತಿದೆ ಸೃಷ್ಟಿಯದೆ ಛವಿಯಾಗಿ ನಿಂದು–
"ಛವಿಯಾಗು, ಛವಿಯಾಗು, ಛವಿಯಾಗು!" ಎಂದು.

ಶಬ್ದದಲಿ ಸವಿಯಾಗಿ ಅರ್ಥದಲಿ ಬೆಳಕಾಗಿ
ಬಾಳ ಭವ್ಯತೆಗಿಲ್ಲಿ ಬೆಳಕು ಸವಿ ಸಾಕಾಗಿ
ಬಾಳುವೆಯ ಸವಿಬೆಳಕ ಬರೆಯುವವ ಬೇಕಾಗಿ
ಸಾರುತಿದೆ ಸೃಷ್ಟಿ ಸವಿಛವಿಯಾಗಿ ನಿಂದು–
"ಕವಿಯಾಗು, ಕವಿಯಾಗು, ಕವಿಯಾಗು!" ಎಂದು.

## ೩. ಪೂರ್ವಾಂಗನೆ ಪಶ್ಚಿಮಾಂಗನೆಗೆ

ನಾ ಕರಿಯಳೆಂದು ನೀ ಜರೆಯಬೇಡ ಬಿಳಿಗೆಳತಿ ಗರ್ವದಿಂದ
ಕಪ್ಪಿಗಿಂತ ಬಿಳಿಬಣ್ಣ ಹೆಚ್ಚು ಹೇಳಾವ ಹಿರಿಮೆಯಿಂದ
ಬಿಳಿಯ ಮೋಡ ನೀಡುವುದು ಇಳೆಗೆ ಬರಿ ಬೆಡಗು ಅಂದಚೆಂದ
ಇಳೆಯ ಜೀವ ಮಳೆ ಬರುವುದಕ್ಕ ಕರಿ ಮೋಡ ಮಾತ್ರದಿಂದ

ಕಣ್ಣೆ ನೋಟ ಕರಿಯಾಲಿಯಿಂದಲೇ ಕುರುಡು ಬರಿಯ ಬಿಳಿಪು
ಬಿಳಿಯ ಕೇಶಗಳೆ ಮುಪ್ಪು ಯೌವನದ ವಿಜಯಧ್ವಜವು ಕಪ್ಪು



ಕಪ್ಪು ಭೂಮಿಯಲೆ ಬೆಳೆಯಬೇಕು ನೀ ತೊಟ್ಟ ನೂಲ ಬಿಳಿಪು
ಬಿಳಿಯ ಮಂಜಿನಲಿ ಬೆಳೆಯಬಹುದೆ? ಬೆಳೆಯುವುದು ಎಲ್ಲ ಕಪ್ಪು!

ಕರಿಯಳಾದರೂ ಉದಯ ನಾನು ನೀನಿರುವೆ ಅಸ್ತಮಾನ
ನೀನೆ ತಾವರೆಯು ನಾನೆ ನೈದಿಲೆಯು ಒಂದೆ ಜಲ ನಿಧಾನ
ನೀ ಬಿಳಿಯ ಹಾಳೆ ನಾ ಕಪ್ಪು ಮಸಿಯು ಆಗೋಣ ಪ್ರೇಮ ಕವನ
ದೇಹಕ್ಕೆ ಬಣ್ಣ ದೇಶಕ್ಕೆ ಬಣ್ಣ ಆತ್ಮಕ್ಕೆ ಯಾವ ಬಣ್ಣ?

ನೀ ಹೆಮ್ಮೆಪಡುವ ಯಾಂತ್ರಿಕತೆಯೆಲ್ಲ ಭಾವಿಸಲು ಕಪ್ಪು ಕಪ್ಪು
ಕಬ್ಬಿಣವು ಕಪ್ಪು ಯಂತ್ರಗಳು ಕಪ್ಪು ಕಲ್ಲಿದ್ದಲೂ ಕಪ್ಪು
ವಾಹನದ ಗಾಲಿ ಅದರುಸಿರು ಕಪ್ಪು ಡಾಂಬರಿನ ಬೀದಿ ಕಪ್ಪು
ಈ ಕಪ್ಪು ಪ್ರಿಯವು, ಅಪ್ರಿಯವದೇಕೆ ಹೇಳೆನ್ನ ಮೈಯ ಕಪ್ಪು?

ಓ ಶ್ವೇತಕನ್ಯೆ ಕಲಿಸುವೆನು ಬಾರೆ ಶೃಂಗಾರ ಸಾರವನ್ನು
ಕುಂಕುಮವನಿಡುವೆ ಬಿಡು ಕೆಂಪು ಕೇಡು ಎಂಬೀ ವಿಚಾರವನ್ನು
ಅರಿಸಿನವ ತೊಡೆವೆ ತೊಡೆ ಹಳದಿ ತ್ಯಾಜ್ಯವೆಂದೆಂಬ ವಾದವನ್ನು
ಹಚ್ಚುವೆನು ಕಣ್ಗೆ ಕಾಡಿಗೆಯ ನೋಡು ದರ್ಪಣದಿ ರೂಪನ್ನು!

ನಾ ಕಪಿಲೆ ನನ್ನ ಕೆಚ್ಚಲಲಿ ಬಿಳಿಯ ಹಾಲಾಗಿ ಬಾಳು ಬಾರೆ
ನೀ ಮೃಗವು ನಿನ್ನ ನಾಭಿಯೊಳು ನಾನು ಕಸ್ತೂರಿಯಪ್ಪೆ ಬಾರೆ
ನಾ ನೀಲಮೇಘ ನನ್ನುದರದಲ್ಲಿ ಸೆಳೆಮಿಂಚಿನಂತೆ ತೋರೆ
ನೀ ಶ್ವೇತಪದ್ಮ ನಾ ನೀಲಭೃಂಗ ನಿನ್ನೆದೆಯ ಮಧುವ ಹೀರೆ!

ಈ ವರ್ಣಮೈತ್ರಿ ಅನಿವಾರ್ಯ ಗೆಳತಿ ಸರ್ವತ್ರ ವಿಶ್ವ ಪ್ರಕೃತಿ
ತೋರುವುದು ಇದನೆ ಸಾರುವುದು ಇದನೆ ಇದೆ ಅದರ ನೀತಿ
ಹೊತ್ತಾರೆ ಕೆಂಪು ಮತ್ತಷ್ಟು ಹಳದಿ ಹೊತ್ತೇರೆ ಬಿಳಿಪು ಗೆಳತಿ
ನಿನ್ನಂಗ ಬಿಳಿದು ಇದೊ ನೆರಳು ಕಪ್ಪು ಎಲ್ಲಿಹುದು ವೈರ ಗೆಳತಿ?

## ೪. ಜಗವೆ ಕೂಡಲ ಸಂಗಮ

ಪ್ರಕೃತಿಯೇ ಗುರು ಗಗನ ಲಿಂಗವು
ಜಗವೆ ಕೂಡಲ ಸಂಗಮ
ಹುಡಿಯೆ ಭಸ್ಮವು ಹುಲ್ಲೆ ಪತ್ರಿಯು
ಜಡವಿದೆಲ್ಲವು ಜಂಗಮ

ಕುಡಿವ ನೀರೇ ತೀರ್ಥ ತಿನ್ನುವ
ರೊಟ್ಟಿ ಶಿವನ ಪ್ರಸಾದವು
ಶ್ರಮದ ಬೆಮರೇ ಸ್ನಾನ ದುಡಿತದ
ಹಾಡೆ ಮಂತ್ರನಿನಾದವು

ಭದ್ರವನ್ನೇ ನೋಳ್ಪ ಅಕ್ಷಿಯೆ
ಭಾವಿಸಲು ರುದ್ರಾಕ್ಷಿಯು
ಭದ್ರವನ್ನೇ ನುಡಿವೆ ಮಾಡುವೆ–
ನೆಂಬ ಬುದ್ಧಿಯೆ ದೀಕ್ಷೆಯು

ಸರ್ವವೂ ಶಿವನಂಶವೆನ್ನುವ
ಧರ್ಮವೊಂದೇ ಧರ್ಮವು
ಅನ್ಯರನು ಅಳಲಿಸದ ಹಿತಕರ
ಕರ್ಮವೊಂದೇ ಕರ್ಮವು

ಎಲ್ಲರೆಲ್ಲರಿಗಾಗಿಯೆನ್ನುವ
ಜ್ಞಾನವೊಂದೇ ಜ್ಞಾನವು
ಒಲಿದು ಒಲಿಸುವ ನಲಿದು ನಲಿಸುವ
ಕಲೆಯೆ ಅಮೃತನಿಧಾನವು

ಉಣಿಸಿ ಉಣ್ಣುವ ಭಾವ ಭಕ್ತಿಯು
ಒಲ್ಲೆನೆನೆ ಸುವಿರಕ್ತಿಯು
ಕೂಡಿ ಕಲಿಯಲು ಕೂಡಿ ಬೆಳೆಯಲು
ಕೂಡಿ ನಲಿಯಲು ಮುಕ್ತಿಯು



## ೫. ಬಸವನ ಬೆಳಕೆ

ಬಸವನ ಬೆಳಕೆ
ಎಲ್ಲಾಡಿ ಬಂದೆ?
ಭಾರತವೆಲ್ಲವ
ಸುತ್ತಾಡಿ ಬಂದೆ!
ನಿಟ್ಟುಸಿರೆದೆಯನು
ಬೆಳಗಿಸಿ ಬಂದೆ
ನಿರಾಶೆಯೆದೆಯನು
ತೊಳಗಿಸಿ ಬಂದೆ
ಹೆಣ್ಣಿನ ಕಂಬನಿ
ಬತ್ತಿಸಿ ಬಂದೆ
ಆಶಾಜ್ಯೋತಿಯ
ಹೊತ್ತಿಸಿ ಬಂದೆ
ದೀನರ ಬಾಳನು ಮುಸುಕಿದ ಕಾಳವ
ಕಬಳಿಸಿ ಬಂದೆ,
ಧವಳಿಸಿ ಬಂದೆ!

ಬಸವನ ಬೆಳಕೆ
ಎಲ್ಲಾಡಿ ಬಂದೆ?
ಕನ್ನಡವನದಲಿ
ಕುಣಿದಾಡಿ ಬಂದೆ
ವಚನಕುಸುಮಗಳ
ಮಲರಿಸಿ ಬಂದೆ
ಹಾಡುಗಬ್ಬಗಳ
ಅಲರಿಸಿ ಬಂದೆ
ಸಂವಾದಗಳನು
ಕುದುರಿಸಿ ಬಂದೆ
ನುಡಿ ಮುತ್ತುಗಳನು
ಉದುರಿಸಿ ಬಂದೆ

ಪಾಮರರೆದೆಯಲಿ ಪ್ರತಿಭೆಯ ಪ್ರಭೆಯನು
ಪಸರಿಸಿ ಬಂದೆ,
ಕುಸುರಿಸಿ ಬಂದೆ!

ಬಸವನ ಬೆಳಕೆ
ಎಲ್ಲಾಡಿ ಬಂದೆ?
ಕಾಯಕ ಕ್ಷೇತ್ರದಿ
ನಲಿದಾಡಿ ಬಂದೆ
ಬೆವರಿನ ಹನಿಯಲಿ
ಬೊಮ್ಮವ ತೋರಿಸಿ
ಕಾಯ ಕಷ್ಟದಲಿ
ಕೈಲಾಸ ತೋರಿಸಿ
ದುಡಿಯದೆ ಪಡೆಯುವ
ಬುದ್ಧಿಯ ಬಿಡಿಸಿ
ವೃತ್ತಿಗೆ ತತ್ವದ
ಛತ್ರವ ಹಿಡಿಸಿ
ದುಡಿಮೆಯ ದೇವರ ದೇಗುಲದಲ್ಲಿ
ನರ್ತಿಸಿ ಬಂದೆ,
ಕೀರ್ತಿಸಿ ಬಂದೆ!
ಬಸವನ ಬೆಳಕೆ
ಎಲ್ಲಿಗೆ ಮುಂದೆ?
'ವಿಶ್ವವೆಲ್ಲವೂ
ನನ್ನದೆ' ಎಂದೆ
ಹೊರಡುವೆ ನಾನು
ಹೊರಡುವೆ ಮುಂದೆ
ಬರಲಿದೆ ವಿಶ್ವವು
ನನ್ನಯ ಹಿಂದೆ
ಅವರಿವರೆಂಬೆನೆ?
ಎಲ್ಲರು ಒಂದೆ!
ಎಲ್ಲರಿಗಿರುವನು



ಒಬ್ಬನೆ ತಂದೆ!
ಎಲ್ಲರ ಲೇಸನು ಬಯಸುತ ಎಲ್ಲೆಡೆ
ಬರುವೆನು ಹೋಗಿ,
ಬರುವೆನು, ಬಂದೆ!

## ೬. ದುಡಿವ ಕೈಗಳಿಗೆ ನಮೋ ನಮೋ!

ದುಡಿವ ಕೈಗಳಿಗೆ ನಮೋ ನಮೋ
ಕೊಡುವ ಕೈಗಳಿಗೆ ನಮೋ ನಮೋ
ಬೇಡದೆ ಕಾಡದೆ ದುಡಿದಷ್ಟನ್ನೇ
ಪಡೆವ ಕೈಗಳಿಗೆ ನಮೋ ನಮೋ!

ದುಡಿವ ಕೈಗಳಿಗೆ, ಗಿಡವ
ನೆಡುವ ಕೈಗಳಿಗೆ, ನೆಟ್ಟು
ಕಡಿವ ಕೈಗಳಿಗೆ, ಜಲ್ಲಿ
ಒಡೆವ ಕೈಗಳಿಗೆ ನಮೋ ನಮೋ!
ಆಡುವ ಕೈಗಳಿಗೆ, ಮೊಸರು
ಕಡೆವ ಕೈಗಳಿಗೆ, ಕಸವ
ಹೊಡೆವ ಕೈಗಳಿಗೆ, ಸಗಣೆ,
ಹಿಡಿವ ಕೈಗಳಿಗೆ ನಮೋ ನಮೋ!

ದುಡಿವ ಕೈಗಳಿಗೆ, ಶಸ್ತ್ರ
ತೊಡುವ ಕೈಗಳಿಗೆ, ವೀಣೆ
ಮಿಡಿವ ಕೈಗಳಿಗೆ, ಸಂತ
ವಿಡುವ ಕೈಗಳಿಗೆ ನಮೋ ನಮೋ!
ಕೊಡುವ ಕೈಗಳಿಗೆ, ಬಾಷ್ಪ
ತೊಡೆವ ಕೈಗಳಿಗೆ, ಅನ್ನ
ವಿಡುವ ಕೈಗಳಿಗೆ, ಎತ್ತಿ
ಹಿಡುವ ಕೈಗಳಿಗೆ ನಮೋ ನಮೋ!

ದುಡಿವ ಕೈಗಳಿಗೆ ನಮೋ ನಮೋ
ಕೊಡುವ ಕೈಗಳಿಗೆ ನಮೋ ನಮೋ!
ಬೇಡದೆ ಕಾಡದೆ ದುಡಿದಷ್ಟನ್ನೇ
ಪಡೆವ ಕೈಗಳಿಗೆ ನಮೋ ನಮೋ!

## ೭. ಕನ್ನಡದ ದೀಪ

ಹೊತ್ತಿತೋ ಹೊತ್ತಿತು
ಕನ್ನಡದ ದೀಪ
ಮುಗಿಯಿತೋ ಮುಗಿಯಿತು
ಶತಮಾನಗಳ ಶಾಪ
ಹೊತ್ತಿತೋ ಹೊತ್ತಿತು
ಕನ್ನಡದ ದೀಪ!

ಕಣ್ಣು ಕುಕ್ಕಿಸುವಂತೆ
ದೇದೀಪ್ಯಮಾನ
ಹರ್ಷವುಕ್ಕಿಸುವಂತೆ
ಶೋಭಾಯಮಾನ
ಕನ್ನಡದ ಮನೆಯಾಗೆ
ಜ್ಯೋತಿರ್ನಿಧಾನ
ಕನ್ನಡದ ಪ್ರಾಣ
ಕನ್ನಡದ ಮಾನ
ಹೊತ್ತಿತೋ ಹೊತ್ತಿತು
ಕನ್ನಡದ ದೀಪ!

ಕನ್ನಡದ ನನ್ನಿಗರ
ಕಣ್ಣ ಬರ ಹಿಂಗೆ
ಕನ್ನಡದ ಮಣ್ಣು ಸಹ
ಹೊರೆಯೇರಿ ಹೊಂಗೆ
ದಡಸೂಸಿ ಹರಿದಾಡೆ



ಆ ಕೃಷ್ಣೆ ತುಂಗೆ
ಮೋದಾಂತರಂಗೆ
ಶುಭ–ಮಂಗಲಾಂಗೆ
ಹೊತ್ತಿತೋ ಹೊತ್ತಿತು
ಕನ್ನಡದ ದೀಪ!

ಬೆಳಕಿನಲೆ ಜಳಕವನು
ಮಾಡೆ ಭೂಗಗನ
ತಮಜಾರೆ ಮಗಮಗಿಸೆ
ಮಲಯಮಧುಪವನ
ನಭಕೇರೆ ಕನ್ನಡದ
ಮಂಗಳ ದ್ಯಾನ
ಕನ್ನಡದ ಪ್ರಾಣ
ಕನ್ನಡ ನಿಧಾನ
ಹೊತ್ತಿತೋ ಹೊತ್ತಿತು
ಕನ್ನಡದ ದೀಪ!

ಉರಿವವರು ಬೇಕಿನ್ನು
ಇದರೆಣ್ಣೆಯಾಗಿ
ಸುಡುವವರು ಬೇಕಿನ್ನು
ನಿಡುಬತ್ತಿಯಾಗಿ
ಧರಿಸುವರು ಬೇಕಿದನು
ಸಿರಿಹಣತೆಯಾಗಿ
ನನ್ನಿಯುಸಿರಾಗಿ
ಧರ್ಮಕ್ಕೆ ಬಾಗಿ
ಹೊತ್ತಿತೋ ಹೊತ್ತಿತು
ಕನ್ನಡದ ದೀಪ!

ಚಿರಕಾಲ ಬೆಳಗಲೀ
ಕನ್ನಡದ ದೀಪ
ಜನಕೆಲ್ಲ ಬೆಳಕಾಗಿ
ಪುಣ್ಯ ಪ್ರದೀಪ

ಭಾರತಕೆ ಬಲವಾಗಿ
ಭವ್ಯ ಪ್ರದೀಪ
ಕಳೆಯುತ್ತ ತಾಪ
ಬೆಳೆಸುತ್ತ ಸೈಪ
ಹೊತ್ತಿತೋ ಹೊತ್ತಿತು
ಕನ್ನಡದ ದೀಪ!

## ೮. ಬಂದಿದೆ ಬಾ ಹೊಸದಿನ!

ಬಂದಿದೆ ಬಾ ಹೊಸದಿನ
ಮೈವೆತ್ತಿಹ ಹೊಸತನ!
ತಿಳಿಯಾದವು ಬಾನು ಬಯಲು
ತಿಳಿಯಾದವು ಕಾನು ಹೊನಲು
ನೀವು ತಿಳಿಯಾಗಿರೆನುತ
ಸಾರ ಬಂದ ಚಾರಣ–
ಬಂದಿದೆ ಬಾ ಹೊಸದಿನ!

ವನವು ಕೊನರಿ ಬಳ್ಳಿ ಮಲರಿ
ಅಣುರೇಣುವಿನೆದೆಯು ಅಲರಿ
ಸೊಬಗು ಸೈಪು ಸೂರೆಯಾಯ್ತು
ಅರಳಲೆಮ್ಮ ನಿಮ್ಮ ಮನ
ಬಂದಿದೆ ಬಾ ಹೊಸದಿನ!

ಪ್ರಾಕ್ತನವೇ ಹೂತಹಾಗೆ
ನೂತನವಿದು ರಯ್ಯಮಾಗೆ
ಹಳಸಿದುದನು ಹೋಳಿಮಾಡಿ
ಹೊಮ್ಮಿ ಬಂದ ಚೇತನ–
ಬಂದಿದೆ ಬಾ ಹೊಸದಿನ!

ಅದೇ ಇನ ಅದೇ ದಿನ
ಅದೇ ವನ ಅದೇ ಜನ



ಅದೇ ಕಾಲಲೀಲೆಯಿರಲು
ಯಾತರಲ್ಲಿ ಹೊಸತನ?
ಬಂದಿದೆ ಬಾ ಹೊಸದಿನ!

ಜಗ ಪ್ರಾಕ್ತನ ಜಡ ಪ್ರಾಕ್ತನ
ಜೀವಸೃಷ್ಟಿ ಚಿರ ನವೀನ
ನೂತನತೆಯು ನೋಟದಲ್ಲಿ
ನೋಡು ತೆರೆದು ಲೋಚನ
ಬಂದಿದೆ ಬಾ ಹೊಸದಿನ!

ಕುಹೂ ಕುಹೂ–ಒಹೋ ಒಹೋ
ಕುಹೂ ಕುಹೂ–ಅಹಾ ಅಹಾ
ಕುಹೂಕುಹೂ ಕೋಗಿಲೆ
ಕೋಗಿಲೆ
ಕೂಗೆಲೆ
ಮೌನವ್ರತವ ನೀಗೆಲೆ
ರಾಗಯೋಗಿಯಾಗೆಲೆ
ನಮ್ಮ ಬನದ ಕೋಗಿಲೆ!
ಮೌನ ಮುಗಿದು ಚಿಗುರ ಮೊಗೆದು
ಮೋದ ಹೆಚ್ಚಿ ಹಾಡುವೆ
ನಿಮ್ಮ ಮನಸುಗಳನು ಕೆಣಕಿ
ಕನಸಿನಲ್ಲಿ ಕಾಡುವೆ! ಕುಹೂ, ಕುಹೂ.........
ಮೈಗೆ ನವಿರ ಮನಕೆ ನವುರ
ನೀಡಿ ನಲಿದು ಹಾಡುವೆ
ಮಲಗಿದೊಲವನೆಬ್ಬಿಸುವೆನು
ಒಲವಿನೊಸಗೆ ನೀಡುವೆ!ಕುಹೂ, ಕುಹೂ.........
ವಿರಹಿಯೆದೆಯು ಉರಿದು ಹೋಯ್ತು
ಮೊಗ್ಗೆಯೆದೆಯು ಬಿರಿದು ಹೋಯ್ತು
ಸಾಕುಮಾಡು ಕೂಜನ!
ರವಿಯ ಮೈಯು ಕಾಯ್ದು ಹೋಯ್ತು
ಸರಸಿಯೆದೆಯು ಬೆಯ್ದುಹೋಯ್ತು

ಸಾಕು ನಿನ್ನ ಗಾಯನ!
ಬಿಸುಪೇರಿತೆ? ಬೇವಸವಿ!
ಮಾಂಗಾಯಿಯ ಪೇಯ ಸವಿ–
ಕೋಕಿಲವನು ದೂರದೆ!
ತಣ್ಣೆಳಲಿದೆ, ತಣ್ಣೀರಿದೆ
ಚಂದನವಿದೆ ತೆಂಬೆಲರಿದೆ
ಇನಿತು ತಾಪವಾರದೆ?
ಬೇವು ಮಾವು ನಗುತಿರೆ
ನಾವು ಹಿಗ್ಗಿ ನಗದಿರೆ
ದೇವ ಮೆಚ್ಚ ಬನ್ನಿರೆ
ಸ್ವಾಗತಿಸಲು ಹೊಸದಿನ
'ಶಾರ್ವರಿ'ಯ ಜನ್ಮದಿನ

## ೯. ಅವಿಭಕ್ತಂ ವಿಭಕ್ತೇಷು!

ಅವಿಭಕ್ತಂ ವಿಭಕ್ತೇಷು
ಇದರಲ್ಲಿಯೆ ನಮಗೆ ಲೇಸು
ಎಲ್ಲೆ ಇರು ಏನೆ ಮಾಡು
ಇದೇ ಮಂತ್ರವನು ಜಪಿಸು
ಇದೇ ಸೂತ್ರವನ್ನು ಪಠಿಸು–
ಅವಿಭಕ್ತಂ ವಿಭಕ್ತೇಷು–
ಅವಿಭಕ್ತಂ ವಿಭಕ್ತೇಷು!

ಕಾಶ್ಮೀರದ ಕಣಿವೆಯಲ್ಲಿ
ಕೇರಳದ ಕುಟೀರದಲ್ಲಿ
ಭಾರತದಲ್ಲೆಲ್ಲ ಕಡೆಗೆ
ಇದೇ ಮಂತ್ರ ಘೋಷವಿರಲಿ–
ಇದೇ ನಾದ ಕೇಳುತಿರಲಿ–



ಅವಿಭಕ್ತಂ ವಿಭಕ್ತೇಷು–
ಅವಿಭಕ್ತಂ ವಿಭಕ್ತೇಷು!

ಭೇದಗಳನು ಎಣಿಸಬೇಡ
ವಾದಗಳನು ಗುಣಿಸಬೇಡ
ಆಸೇತು ಹಿಮಾಚಲ
ಒಂದೇ ಹಾಡು ತಿಳಿದು ನೋಡೆ
ಹಾಡು ಗೆಳೆಯ ಇದೇ ಹಾಡ
ಅವಿಭಕ್ತಂ ವಿಭಕ್ತೇಷು–
ಅವಿಭಕ್ತಂ ವಿಭಕ್ತೇಷು!

ನನ್ನ ನುಡಿ ನಿನ್ನ ನುಡಿ
ನನ್ನ ಗಡಿ ನಿನ್ನ ಗಡಿ
ಒಂದೇ ಜನ್ಮಭೂಮಿಯಿರಲಿ
ಏನಿದೆಲ್ಲ ಗಡಿಬಿಡಿ?
ಇನ್ನಾದರು ನಂಬಿ ನುಡಿ
ಅವಿಭಕ್ತಂ ವಿಭಕ್ತೇಷು–
ಅವಿಭಕ್ತಂ ವಿಭಕ್ತೇಷು!

ಬ್ರಹ್ಮ ವಿಷ್ಣು ಶಂಕರ
ಅಲ್ಲಾ ಹೋ ಅಕಬರ
ಯಾರನ್ನೇ ಸ್ಮರಿಸು ಯಜಿಸು
ಯಾಕೆ ಜಗಳ ಸೋದರ?
ಹೊಮ್ಮ ಲೊಂದೆ ಸುಸ್ವರ–
ಅವಿಭಕ್ತಂ ವಿಭಕ್ತೇಷು–
ಅವಿಭಕ್ತಂ ವಿಭಕ್ತೇಷು!

ಸಪ್ತಶೈಲ ಪಂಚನದಿ
ಸುತ್ತು ಮುತ್ತು ಪುಣ್ಯಶರಧಿ
ಮಸ್ತಕದಲಿ ಹಿಮಕಿರೀಟ!
ಎಂಥ ನಾಡು ಎಂಥ ನಿಧಿ!
ಇಲ್ಲಿ ಬದುಕಲೊಂದೆ ವಿಧಿ

ಅವಿಭಕ್ತಂ ವಿಭಕ್ತೇಷು–
ಅವಿಭಕ್ತಂ ವಿಭಕ್ತೇಷು!

ಯಾರೊಡನೆಯು ವೈರವಿಲ್ಲ
ಯಾರಿಗು ಧಿಕ್ಕಾರವಿಲ್ಲ
ಬಂದವರಿಗೆ ತಂದೆ ತಾಯಿ
ಈ ದೇಶಕೆ ಸಾಟಿಯಿಲ್ಲ
ನುಡಿಯೊ ಇಲ್ಲಿ ಒಂದೆ ಸೊಲ್ಲ
ಅವಿಭಕ್ತಂ ವಿಭಕ್ತೇಷು–
ಅವಿಭಕ್ತಂ ವಿಭಕ್ತೇಷು!

ಏನೆ ಉಡು ಏನೆ ತೊಡು
ಏನೆ ಉಣ್ಣು ಏನೆ ಬಿಡು
ನಿಂತ ನೆಲವು ಒಂದೆ ಇರಲು
ಭೇದ ಭಾವಗಳನು ಸುಡು!
ನಮ್ಮ ಖುಷಿಗಳೊಡನೆ ಹಾಡು–
ಅವಿಭಕ್ತಂ ವಿಭಕ್ತೇಷು–
ಅವಿಭಕ್ತಂ ವಿಭಕ್ತೇಷು!

## ೧೦. ಉತ್ತರ

ಹೂವ ತರಲಿಲ್ಲೆಂದ ನಲ್ಲೆಗೆ
ಯಾವ ಉತ್ತರ ಹೇಳಲಿ?

ಹೂಗಳೇತಕೆ ಹೂವಿಗೆಂಬೆನು
ಯಾಕೆ ಸುಳ್ಳನು ಹೇಳಲಿ?

ಯಾವುದಿದೆ ಹೂ ಪೇಟೆಯೊಳು ಸಖಿ
ನಿನ್ನೊಳೇ ಮೊದಲಿಲ್ಲದ?

ನಿನ್ನೊಳಿರೆ ಜಗದೆಲ್ಲ ಹೂಗಳು
ನಾನು ಭಾವಿಸೆ ಷಟ್ಪದ!



ನಿನ್ನ ಮೂಗಿನ ಸಂಪಿಗೆಗೆ ಸಮ–
ನಾದ ಸಂಪಿಗೆಯೆಲ್ಲಿದೆ?

ಇದ್ದರೂ ಬಾಡುವುದು, ಬಾಡದ
ನಾಗ ಸಂಪಿಗೆಯಿಲ್ಲಿದೆ!

ತುಟಿ ಗುಲಾಬಿಯು, ಕಣ್ಣುಕೋರಕ
ಮುಖವೆ ಕಮಲವು ಮಾನಿನಿ

ನಗೆಯೆ ಮಲ್ಲಿಗೆ ಕೆನ್ನೆ ಕೇದಗೆ
ರದನ ಕುಂದುವು ಕಾಮಿನಿ

ನೀ ಸಚೇತನ ಪುಷ್ಪವನ ಸಖಿ
ಏಕೆ ಹೂಗಳ ಬಯಸುವಿ?

ಹೂಗಳೊಡನೆಯೆ ಸ್ಪರ್ಧೆ ನಡೆದರೆ
ನೀನೆ ಹೂಗಳ ಜಯಿಸುವಿ!

ಉಳಿದ ಹೂಗಳಿಗೊಂದೆ ರೂಪವು
ನಿನ್ನ ಹೂ ಹಲವಂದವು

ಹೂವಿನಲಿ ಹೂ ಹುಟ್ಟುವಚ್ಚರಿ
ಅಲ್ಲಿ ನಡೆವುದಮಂದವು!

ಕೆನ್ನೆ–ಕೇದಗೆಯಲ್ಲಿ ಲಜ್ಜೆಯ
ಚೆಂಗುಲಾಬಿಯು ಬಿರಿವುದು!

ಕಣ್ಣ ನೈದಿಲದಲ್ಲಿ ಕೋಪದ
ಕೆಂಪು ತಾವರೆ ಬರುವುದು!

ಮುಖದ ಕಮಲದಿ ಕಣ್ಣ ನೈದಿಲ
ಅದರೊಳೀ ಕೆಂದಾವರೆ!

ಏನು ಮೋಡಿಯು ಎಂಥ ಗಾಡಿಯು
ಮತ್ತೆ ಹೂಗಳ ತರುವರೆ?

ಮುನಿಸ ಬಿಡು ಬಾ ತೊಡಿಸು ಕೊರಳಿಗೆ
ಕರ–ಶಿರೀಷದ ಮಾಲೆಯ

ಮನದ ಆರಡಿ ಅದರ ಮಧುರಸ
ಕುಡಿದು ಹೊಡೆಯಲಿ ಜೋಲಿಯ.

●●